**ಸಿ.ಸಿ. ನಂ. 88/2018**

**ಸಾಕ್ಷಿ: ಸಿ.ಡಬ್ಲ್ಯೂ:5 ಪಿ.ಡಬ್ಲ್ಯೂ: 5**

| | |
|---|---|
| ಸಾಕ್ಷಿದಾರನ ಹೆಸರು | : ಅನಿತ ಎಂ ಜೆ |
| ಗಂಡನ ಹೆಸರು | : ರಾಜು |
| ವಯಸ್ಸು | : 43 ವರ್ಷ |
| ಉದ್ಯೋಗ | : ಅಬಕಾರಿ ನಿರೀಕ್ಷಕರು, ಹಾಸನ ಉಪವಿಭಾಗ |
| ವಾಸಸ್ಥಳ | : ಹಾಸನ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾ: 27.02.2026.**

**ಮುಖ್ಯ ವಿಚಾರಣೆ:** ಎಪಿಪಿಯವರಿಂದ,

ನಾನು ಅಬಕಾರಿ ಉಪಆಯುಕ್ತಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ 2016 ಆಗಸ್ಟ್ ರಿಂದ 2019 ಜುಲೈ ನವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 13.04.2017 ರಂದು ಬೇಲೂರು ಟೌನ್ ನಲ್ಲಿ ಗಸ್ತಿನಲ್ಲಿ ಇದ್ದಾಗ ಸುಮಾರು ಬೆ:8.35 ಗಂಟೆಗೆ ಹಲ್ಮಿಡಿ ಗ್ರಾಮದ ಸುಮಿತ್ರ ಕೋಂ ರವಿ ಎಂಬುವರರು ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಂತರ ಹಲ್ಮಿಡಿ ಗ್ರಾಮಕ್ಕೆ ಬಂದು ಚಾಸಾ-1 ಮತ್ತು 2 ರವರಿಗೆ ವಿಷಯ ತಿಳಿಸಿ ದಾಳಿ ವೇಳೆಯಲ್ಲಿ ಪಂಚರಾಗಿ ಸಹಕರಿಸಬೇಕು ಎಂದು ಕೋರಿದ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಾನು, ಚಾಸಾ-1 ಮತ್ತು 2 ರವರನ್ನು ಕರೆದುಕೊಂಡು ಆರೋಪಿ ಮನೆಯ ಹತ್ತಿರ ಹೋಗಿ ಕೂಗಿ ಕರೆದಾಗ ಒಬ್ಬ ಮಹಿಳೆ ಹೊರ ಬಂದಿದ್ದು, ಆಕೆಯ ಹೆಸರು ಕೇಳಿದಾಗ ಸುಮಿತ್ರ ಕೋಂ ರವಿ ಎಂದು ತಿಳಿಸಿದರು. ನಂತರ ಮಾಹಿತಿ ಬಂದ ವಿಷಯ ತಿಳಿಸಿ, ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿಯಲ್ಲಿ ಸ್ಥಳದಲ್ಲೆ ಶೋಧನ ಸಮುಚಿತ ಆಧಾರ ತಯಾರಿಸಿ ಸಿಬ್ಬಂದಿ ಮತ್ತು ಪಂಚರ ಸಮಕ್ಷಮ ಅಂಗ ಶೋಧನೆ ಮಾಡಿಕೊಂಡು ಮನೆ ಪ್ರವೇಶಿಸಿದಾಗ ಮನೆಯಲ್ಲಿ 5 ಲೀ ಸಾಮಾರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 5 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ 15 ಲೀ ಸಾಮರ್ಥ್ಯದ 2 ಪ್ಲಾಸ್ಟಿಕ್ ಕೊಡಗಳಲ್ಲಿ 30 ಲೀ ಬೆಲ್ಲದಕೊಳೆ ಇರುವುದು ಕಂಡು ಬಂದಿರುತ್ತದೆ. ಆರೋಪಿ ಸದರಿ ಸ್ವತ್ತುಗಳು ತನಗೆ ಸೇರಿದ್ದು, ಮಾರಾಟ ಮಾಡುವ ಉದ್ದೇಶಕ್ಕಾಗಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಸ್ವತ್ತಿನ

ಪೈಕಿ ಬೆಲ್ಲದ ಕೊಳೆಯಿಂದ 500 ಎಂ.ಎಲ್, ಕಳ್ಳಭಟ್ಟಿ ಸಾರಾಯಿಯಿಂದ 500 ಎಂ.ಎಲ್ ಅನ್ನು ಪ್ಲಾಸ್ಟಿಕ್ ಬಾಟಲ್ ಗೆ ಮಾದರಿಗಾಗಿ ತೆಗೆದು, ಮುಚ್ಚಳದಿಂದ ಮುಚ್ಚಿ, ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲನ್ನು ಜರುಗಿಸಲಾಯಿತು. ಮಾದರಿ ಚೀಟಿ ತಯಾರಿಸಿ ಪಂಚರ ಸಹಿ ಪಡೆದು ಸದಗಿ ಮಾದರಿಗಳಿಗೆ ಅಂಟಿಸಲಾಯಿತು. ಮಾದರಿ ನಕಲನ್ನು ತಯಾರಿಸಿ ಮು.ಮಾಲುಗಳಿಗೆ ಅಂಟಿಸಲಾಯಿತು. ಕೃತ್ಯ ನಡೆದ ಸ್ಥಳದ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಹಿತ್ತಲು, ಉತ್ತರಕ್ಕೆ ಗಲ್ಲಿ, ದಕ್ಷಿಣಕ್ಕೆ ರಸ್ತೆ ಇರುವುದು ಕಂಡು ಬರುತ್ತದೆ. ಮಹಜರನ್ನು ಬೆಃ 9.10–10.30 ಗಂಟೆವರೆಗೆ ಬರೆದಿರುತ್ತೇನೆ. ನಂತರ ಮುದ್ದೆಮಾಲಿನೊಂದಿಗೆ ಕಚೇರಿಗೆ ಬಂದು ಪ್ರವವವರದಿಯನ್ನು ಹಾಗೂ ಇನ್ನಿತರೆ ದಾಖಲಾತಿಗಳನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಚಾಸಾ–6 ರವರರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನಿಪಿ–1 ರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1ಡಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–2 ಮಾದರಿ ಸೀಲಿನ ನಕಲಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ–2ಸಿ ಎಂದು ಗುರುತಿಸಲಾಯಿತು. ಶೋಧನ ಸಮುಚಿತ ಆಧಾರವನ್ನು ನಿಪಿ–5 ಎಂದು ಸಹಿಯನ್ನು ನಿಪಿ–5ಎ ಎಂದು ಗುರುತಿಸಲಾಯಿತು. ಪ್ರವವ ವರದಿಯನ್ನು ನಿಪಿ–6 ಎಂದು ಸಹಿಯನ್ನು ನಿಪಿ–6ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಎಂಒ–1 ಮತ್ತು 2 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. .

ಃಃಪಾಟೀ ಸವಾಲುಃ ಆರೋಪಿ/ಗಳ ಪರ ವಕೀಲರಾದ ಶ್ರೀ ಬಿ ಎಸ್ ಜಿ ರವರಿಂದಃಃ

ನಾನು ಕೆಂಪೇಗೌಡ ಸರ್ಕಲ್ ನಲ್ಲಿ ಗಸ್ತು ನಡೆಸುತ್ತಿದ್ದಾಗ ಮಾಹಿತಿ ಬಂದಿರುತ್ತದೆ. ನಮ್ಮ ಇಲಾಖೆಯ ಪೇದೆಯಾದ ಚಾಸಾ–3, 4 ಮತ್ತು ವಾಹನ ಚಾಲಕ ರವಿ ನನ್ನ ಜೊತೆಗೆ ಇದ್ದರು. ಆ ದಿನ ಚಾಸಾ–6 ರವರು ನನ್ನ ಜೊತೆ ಇರಲಿಲ್ಲ. ಬೇಲೂರು– ಚಿಕ್ಕಮಗಳೂರು ಮಾರ್ಗವಾಗಿ ಹಲ್ಮಿಡಿ ಗ್ರಾಮಕ್ಕೆ ಹೋಗಿರುತ್ತೇವೆ. ಪಂಚರನ್ನು ಹಲ್ಮಿಡಿ ಗ್ರಾಮದ ಸರ್ಕಲ್ ನಲ್ಲಿ ಭೇಟಿ ಮಾಡಿರುತ್ತೇನೆ. ಸದರಿ ಸರ್ಕಲ್ ನ ಹೆಸರು ಗೊತ್ತಿಲ್ಲ. ಈ ಮೊದಲು ಆರೋಪಿಯ ಮನೆ ಪರಿಚಯ ಇರಲಿಲ್ಲ. ಆರೋಪಿ ಮನೆಯ ಬಾಗಿಲು ಯಾವ ದಿಕ್ಕಿಗೆ ಇತ್ತು ಎಂದು ನೆನಪಿಲ್ಲ. ಆರೋಪಿ ಮನೆ ಹೆಂಚಿನ ಮನೆಯಾಗಿತ್ತು. ಸದರಿ ಮನೆ ಯಾರಿಗೆ ಸೇರಿತ್ತು ಎಂದು ಪರಿಶೀಲನೆ ಮಾಡಿರುವುದಿಲ್ಲ. ತಯಾರಿಕೆಗೆ ಸಂಬಂಧಿಸಿದ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ. ಸ್ಥಳದಲ್ಲಿ ಕೊಂಡು ಕೊಳ್ಳುವ ಯಾವುದೇ ವ್ಯಕ್ತಿಗಳು ಆ ದಿನ ಇರಲಿಲ್ಲ. ಅಳತೆ ಮಾಡುವ ಯಾವುದೇ ಸಾಧನಗಳು ಸಿಕ್ಕಿರುವುದಿಲ್ಲ.

ಚಾಸಾ-1 ರವರು ಹಲ್ಮಿಡಿ ಗ್ರಾಮದಲ್ಲಿ ವಾಸವಾಗಿದ್ದರು. ಚಾಸಾ-1 ರವರನ್ನು ನಾನೇ ಕರೆದಿರುತ್ತೇನೆ. ಹಲ್ಮಿಡಿ ಗ್ರಾಮದಲ್ಲಿ ಯಾವುದೇ ಸರ್ಕಲ್ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯ ಪಶ್ಚಿಮ ದಿಕ್ಕಿಗೆ ಇರುಬವ ಹಿತ್ತಲು ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಉತ್ತರಕ್ಕಿರುವ ಗಲ್ಲಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಹಲ್ಮಿಡಿ ಗ್ರಾಮದಲ್ಲಿ ಆರೋಪಿಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯ ಅಕ್ಕಪಕ್ಕ ಯಾವ ವ್ಯಕ್ತಿಗಳ ಮನೆ ಇತ್ತು ಎಂದು ಹೇಳಲಾಗುವುದಿಲ್ಲ. ಅಕ್ಕಪಕ್ಕದ ಮನೆಯ ವ್ಯಕ್ತಿಗಳು ಪಂಚರಾಗಲು ನಿರಾಕರಿಸಿದ್ದು, ಅವರ ಹೆಸರುಗಳು ಗೊತ್ತಿಲ್ಲ. ಆರೋಪಿಯನ್ನು ಬೇಲೂರಿನಲ್ಲಿ ದಸ್ತಗಿರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮಾದರಿಗಳನ್ನು ಎಫ್ ಎಸ್ ಎಲ್ ಗಾಗಿ ಠಾಣೆಯಲ್ಲೇ ಕುಳಿತು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಹಲ್ಮಿಡಿ ಗ್ರಾಮದಲ್ಲಿ ವಾಸವಿಲ್ಲ ಮತ್ತು ಅವರಿಗೆ ಸೇರಿದ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ನಮೂದಿಸಿರುವ ಚಕ್ಕುಬಂದಿ ಮನೆಯ ಚಕ್ಕುಬಂದಿಯಗಿತ್ತು. ಅಂಕಿ ಅಂತಗಳ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ-1 ಮತ್ತು 2 ಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು